# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2119
ಸದಸ್ಯರ ಹೆಸರು : ಶ್ರೀ ಬಿ.ಜಿ. ಪಾಟೀಲ್
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 25.03.2026

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಪ್ರಸ್ತುತ ಕಾರ್ಯಾಚರಣೆಯಲ್ಲಿರುವ ಬಸ್ಸುಗಳ ಸಂಖ್ಯೆ ಎಷ್ಟು; ಹಾಗೂ ದೂರದ ಊರುಗಳಿಗೆ ಸಾರ್ವಜನಿಕರು ಪ್ರಯಾಣಿಸಲು ಸ್ಲೀಪರ್ ಬಸ್ಸುಗಳ ಸಂಖ್ಯೆ ಎಷ್ಟು; ಸ್ಲೀಪರ್ ಬಸ್ಸುಗಳ ಕಾರ್ಯಾಚರಣೆಯ ಸಂಖ್ಯೆಯನ್ನು ಹೆಚ್ಚಳ ಮಾಡಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; (ವಿವರ ನೀಡುವುದು)</td><td rowspan="4">
ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಪ್ರಸ್ತುತ ವಿವಿಧ ಮಾದರಿಯ 4990 ಬಸ್ಸುಗಳು ಮತ್ತು 153 ಸ್ಲೀಪರ್ ಬಸ್ಸುಗಳು ಕಾರ್ಯಾಚರಣೆಯಲ್ಲಿರುತ್ತವೆ.
ಪ್ರಸ್ತುತ ಕ.ಕ.ರ.ಸಾ.ನಿಗಮದಿಂದ ಸಾರ್ವಜನಿಕ ಪ್ರಯಾಣಿಕರ ಬೇಡಿಕೆ/ಅವಶ್ಯಕತೆಗನುಗುಣವಾಗಿ 12 ಎಸಿ ಸ್ಲೀಪರ್, 06 ಕಲ್ಯಾಣ ರಥ (ವೋಲ್ವೋ ಮಲ್ಟಿ ಆಕ್ಸಲ್ ಎಸಿ ಸ್ಲೀಪರ್), 118 ನಾನ್ ಎಸಿ ಸ್ಲೀಪರ್ ಹಾಗೂ 27 ರಾಜಹಂಸ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಸದರಿ ಸಾರಿಗೆಗಳ ಪ್ರಯೋಜನವನ್ನು ಸಾರ್ವಜನಿಕ ಪ್ರಯಾಣಿಕರು ಪಡೆದುಕೊಳ್ಳುತ್ತಿರುತ್ತಾರೆ.
ನಿಗಮದಲ್ಲಿ 4990 ವಾಹನಗಳಿಂದ 4736 ಅನುಸೂಚಿಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಜಾರಿಯಲ್ಲಿರುವ ಸುತ್ತೋಲೆಯಂತೆ 8% ಹೆಚ್ಚುವರಿ ವಾಹನಗಳಂತೆ ಒಟ್ಟು 379 ಹೆಚ್ಚುವರಿ ಬಸ್ಸುಗಳ ಅವಶ್ಯಕತೆಯಿದ್ದು, ಪ್ರಸ್ತುತ 254 ಹೆಚ್ಚುವರಿ ಬಸ್ಸುಗಳು ಇರುತ್ತವೆ.
ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ 2023-24ರ ಪೂರ್ವದ 04 ವರ್ಷಗಳಲ್ಲಿ ಹೊಸ ಬಸ್‌ಗಳನ್ನು ಖರೀದಿಸಿರಲಿಲ್ಲ.
ಆದರೆ, ನಿಗಮದಲ್ಲಿ 2023-24 ರಿಂದ 2025-26 ರವರೆಗೆ ಖರೀದಿಸಿರುವ / ಖರೀದಿ ಹಂತದಲ್ಲಿರುವ ಹೊಸ ಬಸ್ಸುಗಳ ವಿವರ ಕೆಳಕಂಡಂತಿದೆ:
<table>
<tr><th>ಸಂಸ್ಥೆಗಳು</th><th>202324 (Jan)</th><th>2024-25</th><th>2025-26</th><th>ಒಟ್ಟು</th></tr>
<tr><td>ಕ.ಕ.ರ.ಸಾ. ನಿಗಮ</td><td>720</td><td>307</td><td>146</td><td>1173</td></tr>
</table>
ಮುಂದುವರೆದು, ಈಗಾಗಲೇ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡಿದ್ದು, ಮಾರ್ಚ್-2026ರ ನಂತರ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಸೇರ್ಪಡೆಗೊಳ್ಳಲಿರುವ ಒಟ್ಟು ಬಸ್‌ಗಳ ವಿವರ ಕೆಳಕಂಡಂತಿರುತ್ತದೆ:
<table>
<tr><th>ಸಂಸ್ಥೆ/ನಿಗಮ</th><th>ಬಸ್‌ಗಳ ಸಂಖ್ಯೆ</th><th>ಬಸ್‌ಗಳ ವಿವರ</th></tr>
<tr><td>ಕ.ಕ.ರ.ಸಾ.ನಿಗಮ</td><td>56</td><td>20 ಎ.ಸಿ. ಸ್ಲೀಪರ್ 20 ನಾನ್ ಎ.ಸಿ. ಸ್ಲೀಪರ್ ಮತ್ತು 16 ಎ.ಸಿ. ಸೀಟರ್ ಬಸ್ಸುಗಳು.</td></tr>
</table>
</td></tr>
<tr><td>ಆ.</td><td>ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬಸ್ಸುಗಳಿಗಿಂತ ಖಾಸಗಿ ಬಸ್ಸುಗಳು ಹೆಚ್ಚು ಕಾರ್ಯಾಚರಣೆ ಮಾಡುತ್ತಿರುವುದು ನಿಗಮದ ವೈಫಲ್ಯವಲ್ಲವೇ; ಈ ವೈಫಲ್ಯಕ್ಕೆ ಕಾರಣವೇನು;</td></tr>
<tr><td>ಇ.</td><td>ಕಲ್ಯಾಣ ಕರ್ನಾಟಕ ಭಾಗಕ್ಕೆ ಹೆಚ್ಚಿನ ಸ್ಲೀಪರ್ ಬಸ್ಸುಗಳನ್ನು ಮಂಜೂರು ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು; (ವಿವರ ನೀಡುವುದು)</td></tr>
<tr><td>ಈ.</td><td>2024-25ನೇ ಸಾಲಿನಲ್ಲಿ ಎಷ್ಟು ಹೊಸ ಬಸ್ಸುಗಳನ್ನು ಖರೀದಿ ಮಾಡಲಾಗಿದೆ; ಇವುಗಳಲ್ಲಿ ಡೀಸೆಲ್ ಮತ್ತು ಇವಿ ಬಸ್ಸುಗಳೆಷ್ಟು? (ವಿವರ ನೀಡುವುದು)</td></tr>
</table>

| ಕ್ರ. ಸಂ. | ಪ್ರಶ್ನೆ | ಉತ್ತರ |
| --- | --- | --- |
| | | 2025-26ನೇ ಸಾಲಿನಲ್ಲಿ 750 ವಿವಿಧ ಮಾದರಿ ಬಸ್ಸುಗಳನ್ನು ಖರೀದಿಸಲು ಯೋಜನೆ ರೂಪಿಸಲಾಗಿದು, ಅವುಗಳಲ್ಲಿ 20 ನಾನ್ ಎ.ಸಿ. ಸ್ಲೀಪರ್ ಹಾಗೂ 10 ಎ.ಸಿ. ಸ್ಲೀಪರ್ ಬಸ್ಸುಗಳು ಒಳಗೊಂಡಿರುತ್ತವೆ.<br><br>ಕೇಂದ್ರ ಸರ್ಕಾರದ PM e-sewa ಯೋಜನೆಯಡಿಯಲ್ಲಿ ನಿಗಮಕ್ಕೆ ಒಟ್ಟು 200 ವಿದ್ಯುತ್ ಚಾಲಿತ ಬಸ್ಸುಗಳನ್ನು GCC ಮಾದರಿಯಲ್ಲಿ ಆಚರಣೆ ಮಾಡಲು ಮಂಜೂರಾತಿ ದೊರೆತಿದ್ದು, ಮುಂದಿನ ದಿನಗಳಲ್ಲಿ ಸೇರ್ಪಡೆಗೊಳಿಸಲು ಯೋಜಿಸಲಾಗಿರುತ್ತದೆ. ಪ್ರಸ್ತುತ ನಿಗಮದಲ್ಲಿ ಯಾವುದೇ ವಿದ್ಯುತ್ ಚಾಲಿತ ಬಸ್ಸುಗಳು ಕಾರ್ಯಾಚರಣೆಯಲ್ಲಿರುವುದಿಲ್ಲ.<br><br>2025-26ನೇ ಸಾಲಿನ ಆಯವ್ಯಯ ಕಂಡಿಕೆ 469 (iii)ರ ಘೋಷಣೆಯನ್ವಯ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ 400 ಬಸ್ಸುಗಳನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಬಸ್ಸುಗಳ ಖರೀದಿಗೆ ಅನುದಾನ ಮಂಜೂರಾತಿ ಕೋರಿ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅನುದಾನ ನಿರೀಕ್ಷಿಸಲಾಗಿದೆ.<br><br>2026-27ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ 480 ರಲ್ಲಿ ನಾಲ್ಕು ಸಾರಿಗೆ ನಿಗಮಗಳಿಗೆ 1000 ಡೀಸೆಲ್ ಬಸ್‌ಗಳನ್ನು ಒದಗಿಸಲಾಗುವುದು ಎಂದು ಘೋಷಿಸಲಾಗಿರುತ್ತದೆ. ಮುಂದುವರೆದು, ನಿಗಮದಲ್ಲಿನ ಹೆಚ್ಚುವರಿ ಬಸ್‌ಗಳು (Spare Fleet) ಹಾಗೂ ನಿರುಪಯುಕ್ತಗೊಳಿಸುವ ಬಸ್‌ಗಳನ್ನು ಪರಿಗಣಿಸಿ ಹಂತ ಹಂತವಾಗಿ ಸ್ವೀಕರಿಸಲಾಗುವ ಹೊಸ ಬಸ್‌ಗಳನ್ನು ನಿಗಮದ ಕಾರ್ಯಾಯೋಜನೆಯಂತೆ ಅನುಸೂಚಿಗಳ ಅವಶ್ಯಕತೆಗೆ ಅನುಗುಣವಾಗಿ ಬಸ್‌ಗಳನ್ನು ವಿಭಾಗವಾರು ಹಂಚಿಕೆ ಮಾಡಲು ಆದ್ಯತೆಯ ಮೇರೆಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಟಿಡಿ 147 ಟಿಸಿಕ್ಯೂ 2026

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು